


ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# 'ಕೆಸರಿನಲ್ಲಿ ಅರಳಿದ ಕಮಲ'

ಈ ವಾರದ ಅಂಕಣದ ಶಿರೋನಾಮೆಯನ್ನು ನೋಡಿ ಓದುಗರು ಗಲಿಬಿಲಿಗೊಳಬಹುದು. ಇದೇನಿದು? ಕಳೆದ ವಾರದ ಅಂಕಣದ ಕೊನೆಯಲ್ಲಿ ಓದುಗರಿಗೆ ನಿರೀಕ್ಷಿಸಲು ಸೂಚಿಸಿದ್ದ ವಿಷಯವನ್ನು ಬಿಟ್ಟು ಬಳ್ಳಾರಿ ಮರುಚುನಾವಣೆಯ ವಿಷಯವಾಗಿ ಅದೂ ಇನ್ನೂ ಫಲಿತಾಂಶ ಹೊರಬೀಳುವ ಮೊದಲೇ ಬಿ.ಜೆ.ಪಿ ಪಕ್ಷದ ಪರವಾಗಿ ಭವಿಷ್ಯ ನುಡಿದಂತೆ ಇದೆಯಲ್ಲಾ ಎಂದು ಅನ್ನಿಸಬಹುದು. ವೈಯಕ್ತಿಕ ತೆವಲುಗಳಿಗಾಗಿ ಜನರನ್ನು ಕುರಿಗಳನ್ನಾಗಿ ಮಾಡಿಕೊಂಡು ಹಣಾಹಣಿ ನಡೆಸುತ್ತಿರುವ ಇಂದಿನ ಸೇಡಿನ ರಾಜಕೀಯವನ್ನು ವಿಚಾರವಂತರು ಖಂಡಿಸುವುದು ಈಗಿನ ತುರ್ತು ಅಗತ್ಯ. ಸ್ವಾತಂತ್ರ್ಯಪೂರ್ವಕಾಲದಲ್ಲಿ ಆಗಿನ ಮೈಸೂರು ಮಹಾರಾಜರ ಆಳ್ವಿಕೆಯಲ್ಲಿ ಜಿಲ್ಲಾಬೋರ್ಡ್ ಮೊದಲಾದ ಸ್ಥಳೀಯ ಸಂಸ್ಥೆಗಳ ಚುನಾವಣಾ ನಿಯಮಗಳು ಇಲ್ಲಿ ಸ್ಮರಣೀಯ. ಬಹುಮತ ಪಡೆದು ಗೆದ್ದ ಅಭ್ಯರ್ಥಿ ಕಾರಣಾಂತರಗಳಿಂದ ರಾಜೀನಾಮೆ ಕೊಟ್ಟರೆ ಸೋತವರಲ್ಲಿ ಹೆಚ್ಚಿನ ಮತ ಗಳಿಸಿದವರು ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ತಾನೇ ತಾನಾಗಿ ಆಯ್ಕೆಯಾಗುತ್ತಿದ್ದರು, ಮರು ಚುನಾವಣೆ ನಡೆಯುತ್ತಿರಲಿಲ್ಲ. ರಾಜಪ್ರಭುತ್ವವನ್ನು ಕೊನೆಗಾಣಿಸಿ ಪ್ರಜಾಪ್ರಭುತ್ವಕ್ಕೆ ಕಾಲಿರಿಸಿದ ಮೇಲೆ ಅಂತಹುದೇ ನಿಯಮ ಈಗಲೂ ಇದ್ದಿದ್ದರೆ ಕರ್ನಾಟಕದ ಇಂದಿನ ರಾಜಕೀಯ ಚಿತ್ರಣ ಏನಾಗುತ್ತಿತ್ತು ಎಂಬುದು ಚಿಂತನಾರ್ಹ.

ಅದೇನೇ ಇರಲಿ. ಈ ವಾರದ ಅಂಕಣದಲ್ಲಿ ಬರೆಯಹೊರಟಿರುವುದು ಬಳ್ಳಾರಿಯ ರಾಜಕೀಯ ರಾಡಿಯನ್ನು ಕುರಿತು ಅಲ್ಲ. ಈ ನಾಡಿನ ರಾಜಕೀಯ ರಾಡಿಯಲ್ಲಿ ತಮ್ಮ ಕೈಗಳನ್ನು ಕೆಸರು ಮಾಡಿಕೊಳ್ಳದೆ ಕೆಸರಿನಲ್ಲಿ ಅರಳಿದ ಕಮಲದ ಹೂವಿನಂತೆ ರಾಜ್ಯ ಮತ್ತು ರಾಷ್ಟ್ರದ ರಾಜಕಾರಣದಲ್ಲಿ ಪರಿಶುದ್ಧ ಜೀವನ ನಡೆಸಿದ ಕೊಂಡಜ್ಜಿ ಬಸಪ್ಪನವರನ್ನು ಕುರಿತು ಈ ಲೇಖನ. ಹಿಂದಿನ ಅಂಕಣದಲ್ಲಿ ಪ್ರಸ್ತಾಪಿಸಿದಂತೆ ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆಯಲ್ಲಿ ವಿಧಾನ ಮಂಡಲ ಗ್ರಂಥಾಲಯ ಸಮಿತಿಯು ಪ್ರಕಟಿಸಿ ಕಳೆದ ವಾರ ದಾವಣಗೆರೆಯಲ್ಲಿ ಬಿಡುಗಡೆ ಮಾಡಿದ ಮತ್ತೊಂದು ಗ್ರಂಥ 'ಕೊಂಡಜ್ಜಿ ಬಸಪ್ಪ'. ಲೇಖಕರು ನಾಡಿನ ಹಿರಿಯ ಸಾಹಿತಿಗಳಾದ ಸಾ.ಶಿ. ಮರುಳಯ್ಯನವರು. ಪುಸ್ತಕದಲ್ಲಿ ಐದು ಭಾಗಗಳಿವೆ. ಮೊದಲ ಭಾಗ ಕೊಂಡಜ್ಜಿ ಬಸಪ್ಪನವರ ಸಂಕ್ಷಿಪ್ತ ಜೀವನ ಚರಿತ್ರೆ. ಎರಡನೆಯ ಭಾಗ ಅವರು 60 ರ ದಶಕದಲ್ಲಿ ರಾಜ್ಯಸಚಿವರಾಗಿದ್ದಾಗ ಸದನದಲ್ಲಿ ನಡೆದ ಪ್ರಶ್ನೋತ್ತರಗಳ ಸಂಗ್ರಹ. ಮೂರನೆಯ ಭಾಗ ಕೇಂದ್ರ ಆರೋಗ್ಯ ಉಪಸಚಿವರಾಗಿದ್ದಾಗ ಸಂಸತ್ತಿನಲ್ಲಿ ನಡೆಸಿದ ಚರ್ಚೆ. ನಾಲ್ಕನೆಯ ಭಾಗ ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆ ಕುರಿತ ಸಮಿತಿಯ ಅಧ್ಯಕ್ಷರಾಗಿ ಸರಕಾರಕ್ಕೆ ಅವರು ಸಲ್ಲಿಸಿದ ವರದಿ. ಐದನೆಯ ಭಾಗ ಕೊಂಡಜ್ಜಿಯವರ ಕೌಟುಂಬಿಕ ಮತ್ತು ಸಾರ್ವಜನಿಕ ಜೀವನವನ್ನು ಪ್ರತಿಬಿಂಬಿಸುವ ಅಪರೂಪದ ಭಾವಚಿತ್ರಗಳ ಸಂಗ್ರಹ.




ಅನೇಕರ ಹೆಸರುಗಳ ಹಿಂದೆ ಮುಂದೆ ವಿಶ್ವವಿದ್ಯಾನಿಲಯಗಳ ಪದವಿಗಳು ಅಥವಾ ಪ್ರಶಸ್ತಿಗಳು ಅಂಟಿಕೊಂಡಿರುತ್ತವೆ. ಆದರೆ ಕೊಂಡಜ್ಜಿ ಬಸಪ್ಪನವರ ಹೆಸರಿಗೆ ಅಂಟಿಕೊಂಡದ್ದು ಅವರ ಹುಟ್ಟೂರಾದ ಕೊಂಡಜ್ಜಿ. ಅದು ಅವರ ಉಸಿರಾಗಿತ್ತು. ಆಗಿನ ದಿನಮಾನಗಳಲ್ಲಿ ಕೊಂಡಜ್ಜಿಯವರು ಎಂದರೆ ದಾವಣಗೆರೆ ಸಮೀಪದ ಒಂದು ಹಳ್ಳಿಯ ಜನ ಎನ್ನುವುದಕ್ಕಿಂತ ಅದು ಬಸಪ್ಪನವರ ಪರ್ಯಾಯನಾಮವಾಗಿತ್ತು. "ಒಬ್ಬೊಬ್ಬ ಮಂತ್ರಿ ಅಥವಾ ಅಧಿಕಾರಿ ತನ್ನ ಅಧಿಕಾರಾವಧಿಯಲ್ಲಿ ಒಂದೊಂದು ಹಳ್ಳಿಯನ್ನು ಉದ್ಧಾರ ಮಾಡುತ್ತಾ ಬಂದರೂ ಸಾಕು, ಕೇವಲ ಹತ್ತು ವರ್ಷಗಳಲ್ಲಿ ಭಾರತ ರಾಮರಾಜ್ಯವಾಗುತ್ತದೆ" ಎಂದು ಹೇಳುತ್ತಿದ್ದ ಅವರು ತಮ್ಮ ಹುಟ್ಟೂರಾದ ಕೊಂಡಜ್ಜಿಯನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಅದರ ಅಭಿವೃದ್ಧಿಗೆ ಮಾಡಿದ ಸೇವಾಕಾರ್ಯಗಳನ್ನು ಲೇಖಕರು ಸೋದಾಹರಣವಾಗಿ ವಿವರಿಸಿದ್ದಾರೆ. 'ಮೃದುವಚನವೇ ಸಕಲ ಜಪಂಗಳಯ್ಯಾ, ಮೃದುವಚನವೇ ಸಕಲ ತಪಂಗಳಯ್ಯಾ, ಸದುವಿನಯವೇ ಸದಾಶಿವನೊಲುಮೆಯಯ್ಯಾ...' ಎಂದು ಬಸವಣ್ಣನವರು ಹೇಳುವಂತೆ ಕೊಂಡಜ್ಜಿ ಬಸಪ್ಪನವರು ಸರಳ ಸಜ್ಜನಿಕೆಯ, ಸದುವಿನಯದ ಸಾಕಾರಮೂರ್ತಿಯಾಗಿದ್ದರು. ನಮ್ಮ ಜೇಬಿನಲ್ಲಿ ಯಾವಾಗಲೂ ಒಂದು ಚಿಕ್ಕ ನೋಟ್‌ಪ್ಯಾಡ್ ಇರುತ್ತದೆ. ಅದರಲ್ಲಿ ಮಾಡಬೇಕಾದ ಕೆಲಸಗಳನ್ನು ನೆನಪಿಟ್ಟುಕೊಳ್ಳಲು, ಮನಸ್ಸಿನಲ್ಲಿ ಮೂಡಿದ ಹೊಸ ವಿಚಾರಗಳನ್ನು ಮರೆಯದಂತೆ ಟಿಪ್ಪಣಿಮಾಡಿಕೊಳ್ಳುವುದನ್ನು ನಾವು ಕಲಿತದ್ದೇ ಅವರಿಂದ. ನಾವು ವಿಯೆನ್ನಾ ವಿಶ್ವವಿದ್ಯಾನಿಲಯದಲ್ಲಿ ಓದು ಮುಗಿಸಿ ಸ್ವದೇಶಕ್ಕೆ ಮರಳಿದ ಸಂದರ್ಭದಲ್ಲಿ ನಮ್ಮನ್ನು ಅವರು ಬೆಂಗಳೂರು ವಿಮಾನನಿಲ್ದಾಣದಲ್ಲಿ ನಿಂತು ಸ್ವಾಗತಿಸಿದ ದೃಶ್ಯ ಈಗಲೂ ಕಣ್ಮುಂದೆ ಹಚ್ಚಹಸಿರಾಗಿದೆ. ದುಂಡನೆಯ ಮುಖ, ಹೊಳಪುಳ್ಳ ಕಣ್ಣುಗಳು, ತಲೆಯ ಮೇಲೆ ಗಾಂಧಿ ಟೋಪಿ, ಆಕರ್ಷಕ ಮೈಕಟ್ಟುಳ್ಳ ಆಜಾನುಬಾಹು, ಕಚ್ಚೆಪಂಚೆ, ನೋಡಲು ಗಂಭೀರವಾದ ವ್ಯಕ್ತಿತ್ವ. ತಾನು ಮಂತ್ರಿ ಎಂಬ ದರ್ಪವಾಗಲೀ, ಅಧಿಕಾರ ಮದವಾಗಲೀ ಅವರಲ್ಲಿರಲಿಲ್ಲ. ಅವರ ಜೀವನದಲ್ಲಿ ಘಟಿಸಿದ ಅನೇಕ ಅಪರೂಪದ ಘಟನೆಗಳು ಈ ಗ್ರಂಥದಲ್ಲಿ ದಾಖಲಾಗಿದ್ದು ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ:

- 2 -

1. ಒಮ್ಮೆ ಕೊಂಡಜ್ಜಿ ಬಸಪ್ಪನವರು ಕೇಂದ್ರ ಸಚಿವರಾಗಿದ್ದಾಗ ಧಾರವಾಡದಲ್ಲಿ ಯಾವುದೋ ಕಾರ್ಯಕ್ರಮವನ್ನು ಮುಗಿಸಿಕೊಂಡು ದಾವಣಗೆರೆಗೆ ಹೊರಟಿದ್ದರು. ಪೋಲೀಸು ಶಿಷ್ಟಾಚಾರದ ಪ್ರಕಾರ ಅವರ ಹಿಂದೆ ಮುಂದೆ ಬೆಂಗಾವಲಾಗಿ ಅನೇಕ ಪೋಲೀಸು ಜೀಪುಗಳು ಹೊರಟವು. ಕೊಂಡಜ್ಜಿಯವರು ತಮ್ಮ ಕಾರನ್ನು ನಿಲ್ಲಿಸಿ ಕೆಳಗಿಳಿದರು. ಏಕಿರಬಹುದೆಂದು ತಕ್ಷಣವೇ ವಿಚಾರಿಸಲು ಬಂದ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಅವರು "ನೀವು ನನ್ನ ಹಿಂದೆ ಬರುವುದು ಬೇಡ. ನನಗೆ ಯಾರ ಭಯವೂ ಇಲ್ಲ. ನೀವು ನಿಮ್ಮ ನಿಮ್ಮ ಠಾಣೆಗೆ ವಾಪಾಸು ಹೋಗಿ" ಎಂದು ನಗುಮುಖದಿಂದ ಹೇಳಿ ಅವರ ಕೈಕುಲುಕಿ ಕಾರು ಹತ್ತಿ ಮುಂದೆ ನಡೆದರು.

ಈ ಘಟನೆಯನ್ನು ಓದಿದಾಗ ಬಹಳ ಹಿಂದೆ ಯಾವುದೋ ಪತ್ರಿಕೆಯಲ್ಲಿ ನೋಡಿದ್ದ ಎರಡು ವ್ಯಂಗ್ಯಚಿತ್ರಗಳು ನಮಗೆ ನೆನಪಾದವು. ಮೊದಲನೆಯ ಚಿತ್ರದಲ್ಲಿ ಪೋಲೀಸರು ಒಬ್ಬ ಕಳ್ಳನನ್ನು ಹಿಡಿದುಕೊಂಡು ಹೋಗುತ್ತಿರುತ್ತಾರೆ. ಅವನನ್ನು ನೋಡಿದ ಮಗು 'ಇವರು ಯಾರು?' ಎಂದು ತಂದೆಯನ್ನು ಕೇಳುತ್ತದೆ. 'ಮಧ್ಯೆ ಇರುವವನು ಕಳ್ಳ, ಅವನ ಹಿಂದೆ ಮುಂದೆ ಇರುವವರು ಪೋಲೀಸರು' ಎಂದು ತಂದೆ ವಿವರಿಸುತ್ತಾನೆ. ಎರಡನೆಯ ಚಿತ್ರದಲ್ಲಿ ಮಂತ್ರಿಮಹೋದಯರೊಬ್ಬರು ಹೋಗುತ್ತಿರುತ್ತಾರೆ. ಅವರ ಹಿಂದೆ ಮುಂದೆ ಸಾಕಷ್ಟು ಸಂಖ್ಯೆಯಲ್ಲಿ ಪೋಲೀಸರು ಬೆಂಗಾವಲಾಗಿ ಇರುತ್ತಾರೆ. ಮಗು ಅದನ್ನು ನೋಡಿ 'ಅಪ್ಪಾ, ನೋಡಿಲ್ಲಿ ಇನ್ನೊಬ್ಬ ದೊಡ್ಡ ಕಳ್ಳ! ಎಷ್ಟೊಂದು ಪೋಲೀಸರು!' ಎಂದು ಉದ್ಗರಿಸುತ್ತದೆ. ಪಾಪ, ಆ ಮಗುವಿಗೆ ಕಳ್ಳ ಯಾರು, ಮಂತ್ರಿ ಯಾರು ಎಂಬ ಅರಿವಿಲ್ಲ, ನಿಜ. ಆದರೆ ಇಂದಿನ ಭಾರತದ ರಾಜಕಾರಣದಲ್ಲಿ ಆ ಮಗು ಹೇಳುವುದೇ ಸರಿ ಎನ್ನಿಸಿದರೆ ಆಶ್ಚರ್ಯವೇನಿಲ್ಲ!

2. ಕೊಂಡಜ್ಜಿ ಬಸಪ್ಪನವರು ಸೌಮ್ಯ ಸ್ವಭಾವದವರಾಗಿದ್ದರೂ ಯಾವುದೇ ಒತ್ತಡಕ್ಕೆ ಮಣಿಯದ ಬಿಗಿ ನಿಲುವು ಉಳ್ಳವರಾಗಿದ್ದರು. ಒಮ್ಮೆ ಇಂಜಿನಿಯರ್ ಒಬ್ಬರಿಗೆ ಬೀದರ್‌ಗೆ ವರ್ಗವಾಗಿತ್ತು. ಆತನು ತನ್ನ ವರ್ಗಾವಣೆಯನ್ನು ರದ್ದುಮಾಡಿಸಿಕೊಳ್ಳಲು ಮಂತ್ರಿಗಳಾದ ಕೊಂಡಜ್ಜಿಯವರಿಗೆ ಅವರ ಆತ್ಮೀಯರಿಂದ ಶಿಫಾರಿಸು ಪತ್ರ ಬರೆಸಿದ್ದನು. ಕೊಂಡಜ್ಜಿಯವರಿಗೆ ಅವನ ವರ್ತನೆ ಹಿಡಿಸಲಿಲ್ಲ. ಆದರೂ ತಾಳ್ಮೆಗೆಡದೆ ಶಿಫಾರಿಸ್ಸು ಮಾಡಿದ್ದ ಸ್ನೇಹಿತರಿಗೆ ಈ ಮುಂದಿನಂತೆ ಉತ್ತರ ಬರೆದರು: "ನೋಡಿ, ಬೀದರ್ ಇರುವುದು ನಮ್ಮ ಕರ್ನಾಟಕದಲ್ಲೇ. ಅಲ್ಲಿಯೂ ನಮ್ಮ ನಿಮ್ಮಂತಹ ಮನುಷ್ಯರಿದ್ದಾರೆ, ಮೃಗಗಳೇನೂ ಇಲ್ಲ. ಶ್ರೀಯುತರ ಸೇವೆ ಅಲ್ಲಿನ ಜನತೆಗೂ ಸಲ್ಲಲಿ. ಇಂದೇ ವರ್ಗಮಾಡಿದ ಸ್ಥಳಕ್ಕೆ ಹೋಗಿ ರಿಪೋರ್ಟ್ ಮಾಡಿಕೊಳ್ಳಲು ಅವರಿಗೆ ಹೇಳಿ. ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ."

3. ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮತ್ತೊಂದು ಹೆಸರು ಕೊಂಡಜ್ಜಿ ಬಸಪ್ಪನವರು. ಕೇಂದ್ರ ಸಚಿವಸ್ಥಾನಕ್ಕೆ ರಾಜೀನಾಮೆ ಕೊಟ್ಟರೂ ಜೀವನದ ಕೊನೆಯುಸಿರಿನವರೆಗೆ ಸ್ಕೌಟ್ಸ್ ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸಿದವರು. ಅದರ ಚೀಫ್ ಕಮಿಷನರ್ ಆಗಿದ್ದ ಅವರು ಜೀವನದಲ್ಲಿ ಶಿಸ್ತನ್ನು ರೂಢಿಸಿಕೊಂಡಿದ್ದರು. ಅತ್ಯಂತ ಸಮಯಪರಿಪಾಲಕರಾಗಿದ್ದರು. ಯಾವುದೇ ಸಭೆ-ಸಮಾರಂಭಗಳಿಗೆ ಅವರು ಎಂದೂ ತಡವಾಗಿ ಹೋಗುತ್ತಿರಲಿಲ್ಲ. ಒಮ್ಮೆ ಅವರು ರಾಜ್ಯಸಚಿವರಾಗಿದ್ದಾಗ ಬೆಳಗಾವಿಯಿಂದ ದಾವಣಗೆರೆಯ ಒಂದು ಕಾರ್ಯಕ್ರಮಕ್ಕೆ ಹೋಗಬೇಕಾಗಿತ್ತು. ಅವರ ಧರ್ಮಪತ್ನಿ ಸರ್ವಮಂಗಳಮ್ಮನವರೂ ಜೊತೆಯಲ್ಲಿದ್ದರು. ಮಾರ್ಗಮಧ್ಯೆ ಅವರು ಪ್ರಯಾಣಿಸುತ್ತಿದ್ದ ಕಾರು ಕೈಕೊಟ್ಟಿತು. ರಿಪೇರಿಗೆ ಕೆಲವು ಗಂಟೆಗಳಾದರೂ ಬೇಕೆಂದು ಕಾರು ಚಾಲಕ ಹೇಳಿದ. ಸಚಿವರು ಕಾರ್ಯಕ್ರಮಕ್ಕೆ ತಡವಾಗುತ್ತದೆಯೆಂದು ಯೋಚಿಸಿ ತಮ್ಮ ಪತ್ನಿಯೊಂದಿಗೆ ಕಾರಿನಿಂದ ಕೆಳಗಿಳಿದು ದಾವಣಗೆರೆ ಕಡೆ ಹೋಗುತ್ತಿದ್ದ ಒಂದು ಲಾರಿಯನ್ನು ಹತ್ತಿ ಸಮಯಕ್ಕೆ ಸರಿಯಾಗಿ ಸಮಾರಂಭಕ್ಕೆ ಹಾಜರಾದರು. ಸಚಿವರು ಲಾರಿಯಲ್ಲಿ ಬಂದುದರಿಂದ ಜನರಿಗೆ ಅವರ ಮೇಲಿನ ಗೌರವವೇನೂ ಕಡಿಮೆಯಾಗಲಿಲ್ಲ, ಇನ್ನಷ್ಟೂ ಹೆಚ್ಚಿತು.

4. ಕೌಟುಂಬಿಕ ಕಲಹಗಳು ಬಹಳಮಟ್ಟಿಗೆ ಅಡಿಗೆಮನೆಯಲ್ಲಿ ಹುಟ್ಟಿಕೊಳ್ಳುತ್ತವೆ. ಅತ್ತೆ-ಮಾವಂದಿರು ಕೊಡುವ ಆಜೀವಶಿಕ್ಷೆಯಲ್ಲಿ ಕೆಲವರು ಸೊಸೆಯಂದಿರ ಪಾಲಿಗೆ ಅಡಿಗೆಮನೆಯೇ ಸ್ಮಶಾನವಾಗಿ ಪರಿಣಮಿಸಬಹುದು. ಇದಕ್ಕೆ ಅಪವಾದದಂತೆ ಇದ್ದವರು ಕೊಂಡಜ್ಜಿ ಬಸಪ್ಪನವರು. ಅವರ ಸೊಸೆಯೊಬ್ಬಳು ಪದವೀಧರೆ. ತೌರುಮನೆಯಲ್ಲಿ ಮುದ್ದಾಗಿ ಬೆಳೆಸಿದ ಆಕೆಯ ತಾಯಿ ಅಡಿಗೆ ಮಾಡುವುದನ್ನು ಸರಿಯಾಗಿ ಕಲಿಸಿರಲಿಲ್ಲ. ಒಮ್ಮೆ ಆಕೆ ಮಾಡಿದ ಅಡಿಗೆ ರುಚಿಯಾಗಿರಲಿಲ್ಲ. ಊಟಕ್ಕೆ ಕುಳಿತ ಗಂಡನು ಹೆಂಡತಿಯ ಮೇಲೆ ರೇಗಾಡಿದ. ಜೊತೆಗೆ ಊಟ ಮಾಡುತ್ತಿದ್ದ ಕೊಂಡಜ್ಜಿಯವರು ಮಗನನ್ನು ತರಾಟೆಗೆ ತೆಗೆದುಕೊಂಡರು: "ಪಾಪ, ಅಡಿಗೆ ಮನೆಗೆ ಹೊಸಬಳು, ಉಪ್ಪು ಹಾಕುವುದನ್ನು ಮರೆತಿರಬಹುದು. ಅದೇ ಒಂದು ದೊಡ್ಡ ಅಪರಾಧವೇ? ಅದಕ್ಕೆ ಏಕಿಷ್ಟು ರಾದ್ಧಾಂತ? ಉಪ್ಪನ್ನು ಹೆಚ್ಚು ತಿನ್ನಲೇಬಾರದು; ಆರೋಗ್ಯಕ್ಕೆ ಒಳ್ಳೆಯದಲ್ಲ ಅಂತ ವೈದ್ಯರು ಹೇಳುತ್ತಾರೆ. ಇಷ್ಟಕ್ಕೂ ಸಾರೇನೂ ಚೆನ್ನಾಗಿಲ್ವೆ? ಉಪ್ಪಿಲ್ಲದಿದ್ದರೂ ರುಚಿಯಾಗಿಯೇ ಇದೆ. ಸುಮ್ಮನೆ ಉಂಡೇಳು ಮಗನೆ!"

ಇಂತಹ ಆದರ್ಶವ್ಯಕ್ತಿಗಳು ಪ್ರತಿಜಿಲ್ಲೆಯ ಇತಿಹಾಸದಲ್ಲಿ ಆಗಿಹೋಗಿದ್ದಾರೆ. ಅವರ ಪರಿಚಯವೇ ಆಯಾಯ ಜಿಲ್ಲೆಯ ಮಕ್ಕಳಿಗೆ ಇಲ್ಲ. ಇಂಗ್ಲೆಂಡಿನ ರಾಜರಾಣಿಯರ ಇತಿಹಾಸ ಬೋಧಿಸುವುದಕ್ಕಿಂತ ನಮ್ಮ ನಾಡಿನ ಇಂತಹ ಉದಾತ್ತ ಚೇತನಗಳ ಪರಿಚಯವನ್ನು ಆಯಾಯ ಜಿಲ್ಲೆಯ ಮಕ್ಕಳಿಗೆ ಮಾಡಿಕೊಡಬೇಕೆಂಬುದು ಈಗಿನ ವಿಧಾನಪರಿಷತ್ತಿನ ಸಭಾಪತಿಗಳಾದ ಡಿ.ಎಚ್. ಶಂಕರಮೂರ್ತಿಯವರ ಮನದಾಸೆ. ಇದನ್ನು ನಮ್ಮ ವಿದ್ಯಾ ಇಲಾಖೆ ಪೂರೈಸಬಲ್ಲುದೇ?

1.4.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑